**ಪಿ.ಡಬ್ಲ್ಯೂ 02**

**ದಿಃ 10.02.2023 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆವಿಧಿ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್.ಎಲ್ ವಕೀಲರಿಂದಃ**

3. ದಾವ ಆಸ್ತಿ ಮೊದಲು ಬಿಂದುಚಾರ್ಯ ಇವರಿಗೆ ಸೇರಿದ್ದು, ಅದು ಮೊದಲು 22 ಎಕರೆ 35 ಗುಂಟೆ ಇತ್ತು. ಬಿಂದುಚಾರ್ಯ ಇವರಿಂದ ಸದರಿ ಆಸ್ತಿ ನನ್ನ ಅತ್ತೆ ವಾದಿಗೆ ಖರೀದಿಸಿರುತ್ತಾಳೆ. ಆ ಬಗ್ಗೆ ಖರೀದಿ ಪತ್ರ ಹಾಜರು ಪಡಿಸಿರುತ್ತೇನೆ 1978-79 ನೇ ಸಾಲಿನಲ್ಲಿ ಖರೀದಿಸಿರುತ್ತಾರೆ. ಆ ಸಮಯದಲ್ಲಿ ನಾನು ಇನ್ನೂ ಜನಿಸಿರಲಿಲ್ಲ. ದಾವ ಆಸ್ತಿಯನ್ನು ಖರೀದಿ ಪ್ರತಿಫಲದ ಹಣವನ್ನು ವಾದಿಯ ಗಂಡ ಕೊಟ್ಟಿರುತ್ತಾರೆ. ಆ ಬಗ್ಗೆ ನನ್ನ ದಾವೆಯಲ್ಲಿ ಅಥವಾ ಮುಖ್ಯವಿಚಾರಣೆಯಲ್ಲಿ ಹೇಳಿ ಬರೆಸಿಲ್ಲ. 22 ಎಕರೆ 35 ಗುಂಟೆ ಪೈಕಿ 16 ಎಕರೆ ಜಮೀನನ್ನು ನನ್ನ ಅತ್ತೆ-ಮಾವ ಮಾರಾಟ ಮಾಡಿರುತ್ತಾರೆ. 6 ಎಕರೆ 10 ಗುಂಟೆ ಮಾತ್ರ ದಾವ ಆಸ್ತಿ ಉಳಿದಿರುತ್ತದೆ. 2005-2006 ನೇ ಸಾಲಿನಲ್ಲಿ 16 ಎಕರೆ ಮಾರಾಟ ಮಾಡಿರುತ್ತಾರೆ. ಆ ಸಮಯದಲ್ಲಿ ವಾದಿಯ ಗಂಡ ಜೀವಂತ ಇದ್ದ. ಹುಲಿಗೇಪ್ಪ ಇವರಿಗೆ 4 ಎಕರೆ 17 ಗುಂಟೆ, ಹುಲಿಗೇಮ್ಮ ಇವರಿಗೆ 4 ಎಕರೆ 37 ಗುಂಟೆ, ಬಸವರಾಜ ಇವರಿಗೆ 3 ಎಕರೆ 17 ಗುಂಟೆ, ತಿಕ್ಕಯ್ಯ ಇವರಿಗೆ 3 ಎಕರೆ ಚಿಲ್ಲರೆ ಗುಂಟೆ ಜಮೀನು ಮಾರಾಟ ಮಾಡಿರುತ್ತಾರೆ. ಒಟ್ಟು ವಿಸ್ತೀರ್ಣದ ಪೈಕಿ 16 ಎಕರೆ ಜಮೀನು ಪಶ್ಚಿಮ ದಿಕ್ಕಿಗೆ ಮಾರಾಟ ಮಾಡಿರುತ್ತಾರೆ, ಉಳಿದ ಕ್ಷೇತ್ರ ಪೂರ್ವ ದಿಕ್ಕಿಗೆ ಇದೆ ಈ ಎಲ್ಲ ವಿಷಯಗಳನ್ನು ವಾದ ಪತ್ರ ಹಾಗೂ ಸಾಕ್ಷಿಯಲ್ಲಿ ಬರೆಸಿಲ್ಲ. ನನ್ನ ಅತ್ತೆ ಹೇಳಿಕೆ ಮೇರೆಗೆ ನನಗೆ ಗೊತ್ತು. ದಾವ ಆಸ್ತಿಯ ದಕ್ಷಿಣಕ್ಕೆ ದೊಡ್ಡಈರಣ್ಣ ಇವರ ಜಮೀನು, ಪಶ್ಚಿಮಕ್ಕೆ ಹುಲಿಗೇಪ್ಪ ಇವರ ಜಮೀನು, ಉತ್ತರಕ್ಕೆ ಬಸವರಾಜ ಇವರ ಜಮೀನು, ಪೂರ್ವಕ್ಕೆ ರಸ್ತೆ ಇದೆ. ಹುಲಿಗೇಪ್ಪ ಇವರು ಮಾತ್ರ ನಮ್ಮ ಅತ್ತೆಯಿಂದ ಖರೀದಿಸಿದರು, ಉಳಿದವರು ಅಲ್ಲ. ನನ್ನ ಮಾವ ವಾದಿಯ ಗಂಡ 2011 ನೇ ಸಾಲಿನಲ್ಲಿ ಮೃತಪಟ್ಟಿರುತ್ತಾರೆ. ವಾದಿಯ ಗಂಡ ಮೃತಪಟ್ಟ ನಂತರ ದಾವ ಆಸ್ತಿಯನ್ನು ವಾದಿ, ನಾನು ಮತ್ತು ನನ್ನ ಹೆಂಡತಿ ನೋಡಿಕೊಂಡು ಹೋಗುತ್ತಿದ್ದೆವೆ. ದಾವ ಆಸ್ತಿಗೆ ಕಂದಾಯವನ್ನು ನನ್ನ ಅತ್ತೆ ಪಾವತಿ ಮಾಡಿರುತ್ತಾರೆ. ಆ ಬಗ್ಗೆ ದಾಖಲೆಗಳನ್ನು ಸಲ್ಲಿಸಿರುತ್ತೇನೆ. ವಾದಿ ಕುರ್ಡಿ ಗ್ರಾಮದಿಂದ ಕಪಗಲ್ ಗ್ರಾಮಕ್ಕೆ ವಲಸೆ ಬಂದು ವಾಸ ಇದ್ದಳು ಅಂದರೆ ಸರಿ. ಸಾಕ್ಷಿ ಕಪಗಲ್ ಗ್ರಾಮದಲ್ಲಿ ವಾದಿಗೆ ಸೇರಿದ 2 ಎಕರೆ ಜಮೀನು ಇತ್ತು ಎಂದು ಹೇಳುತ್ತಾರೆ. ಕಪಗಲ್ ಗ್ರಾಮದಲ್ಲಿ ನನ್ನ ಅತ್ತೆ ವಾದಿಗೆ ಸೇರಿದ ಮನೆ ಇತ್ತು ಅದರ ನಂಬರ್ ಗೊತ್ತಿಲ್ಲ. ಸದರಿ ಮನೆಯ ಪಕ್ಕ ಪ್ರಭುಲಿಂಗ ದೇವಸ್ಥಾನ ಇದೆ. ವಾದಿಯ ಗಂಡ ಮೃತಪಟ್ಟ ನಂತರ ವಾದಿ ಕುರ್ಡಿಯಲ್ಲಿ ವಾಸ ಇದ್ದಳು, ಕಪಗಲ್‌ಗೆ ಹೋಗಿ-ಬರುವುದು ಮಾಡುತ್ತಿದ್ದರು. 2012-2013 ನೇ ಸಾಲಿನಲ್ಲಿ ವಾದಿ ಚೆನ್ನಾಗಿ ಇದ್ದಳು. ಮನೆ ಕೆಲಸ ನೋಡಿಕೊಂಡು ಹೋಗುತ್ತಿದ್ದಳು, ಜಮೀನು ನೋಡಿಕೊಂಡು ಹೋಗಲು ಆಗುತ್ತಿರಲಿಲ್ಲ. ಆ ಸಮಯದಲ್ಲಿ ವಾದಿಗೆ ತಿಳುವಳಿಕೆ ಇತ್ತು.

2005-2006 ರಿಂದ ಜಮೀನಿನ ವ್ಯವಹಾರದ ಬಗ್ಗೆ ವಾದಿಗೆ ಮಾಹಿತಿ ಇತ್ತು ಅಂದರೆ ಸರಿ. ನನ್ನ ಅತ್ತೆ ಮತ್ತು ಮಾವ ಕುಟುಂಬದ ಅಡಚಣೆ ಇದ್ದಾಗ ಅವರ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ ಅಂದರೆ ಸಾಕ್ಷಿ ಆಸ್ತಿಯನ್ನು ಮಾರಾಟ ಮಾಡಿ ಬಂದ ಹಣದಿಂದ ನನ್ನ ಅತ್ತೆ ಮತ್ತು ಮಾವ ಕಪಗಲ್‌ನಲ್ಲಿ ಪ್ರಭುಲಿಂಗ ದೇವಸ್ಥಾನ ಕಟ್ಟಿಸಿರುತ್ತಾರೆ ಎಂದು ಹೇಳುತ್ತಾರೆ. ಆ ಬಗ್ಗೆ ನನ್ನ ಮುಖ್ಯವಿಚಾರಣೆ ಹಾಗೂ ವಾದ ಪತ್ರದಲ್ಲಿ ಹೇಳಿ ಬರೆಸಿರುತ್ತೇವೆ ಸುಮಾರು 16 ಎಕರೆ ಜಮೀನು ಮಾರಾಟ ಮಾಡಿ ಪ್ರಭುಲಿಂಗ ದೇವಸ್ಥಾನ ಕಟ್ಟಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಾದಿ ತಮ್ಮ ಕುಟುಂಬದ ಅಡಚಣೆ ಸಲುವಾಗಿ ಜಮೀನು ಮಾರಾಟ ಮಾಡಿರುತ್ತಾರೆ ಅಂದರೆ ಸರಿಯಲ್ಲ.

3. ಸಾಕ್ಷಿಗೆ ಒಂದು ದಾಖಲೆ ತೋರಿಸಿ ಅದರಲ್ಲಿ ಇರುವ ಪೋಟೋ ವಾದಿಗೆ ಸೇರಿದ್ದು ಎಂದು ಒಪ್ಪಿಕೊಂಡಿರುವುದರಿಂದ ಅದನ್ನು ನಿಡಿ.1 ಎಂದು ಗುರುತಿಸಲಾಯಿತು. ನಿಡಿ.1 ರಂತೆ ವಾದಿ 1 ನೇ ಪ್ರತಿವಾದಿಗೆ ದಾವ ಆಸ್ತಿಯ ನಿರ್ವಾಹಣೆ ಬಗ್ಗೆ ಅಧಿಕಾರ ಪತ್ರವನ್ನು ಬರೆದುಕೊಟ್ಟಿರುತ್ತಾಳೆ ಅಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಅದನ್ನು ಮೊಸದಿಂದ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ನಿಡಿ.1 ರ ಆಧಾರದ ಮೇಲೆ 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ಖಬ್ಜರಹಿತ ಖರೀದಿ ಪತ್ರ ಬರೆದುಕೊಟ್ಟಿರುತ್ತಾರೆ ಅಂದರೆ ಸರಿಯಲ್ಲ ನಿಡಿ.1 ರ ಆಧಾರದ ಮೇಲೆ 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ಖಬ್ಜರಹಿತ ಖರೀದಿ ಪತ್ರ ಬರೆದುಕೊಟ್ಟು ಬಂದ ಹಣವನ್ನು ನನ್ನ ಅತ್ತೆ ವಾದಿಗೆ ಕೊಟ್ಟಿರುತ್ತಾರೆ ಅಂದರೆ ಸರಿಯಲ್ಲ. ನಿಡಿ.1 ರ ಅಧಿಕಾರ ಪತ್ರದ ಆಧಾರದ ಮೇಲೆ 1 ನೇ ಪ್ರತಿವಾದಿ 2 ನೇ ಪ್ರತಿವಾದಿಯ ಹೆಸರಿನಲ್ಲಿ ಖರೀದಿ ಪತ್ರ ಮಾಡಿ ಬಂದ ಪ್ರತಿಫಲದ ಹಣವನ್ನು ವಾದಿಗೆ ಕೊಟ್ಟಿದ್ದರು ಅದು ಮೊಸದಿಂದ ಮಾಡಿಕೊಂಡಿರುತ್ತಾರೆ ಎಂದು ನಾನು ವಾದಿಯ ಸಂಬಂಧಿಕ ಎಂದು ವಾದಿಯನ್ನು ಮುಂದೆ ಮಾಡಿ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಅಂದರೆ ಸರಿಯಲ್ಲ. ವಾದಿಯ ಮೇಲೆ ಒತ್ತಡ ಹಾಕಿ ಪ್ರತಿವಾದಿಯರ ಮೇಲೆ ಒಂದು ಕ್ರಿಮಿನಲ್ ಮೊಕದ್ದಮೆ ಹಾಕಿರುತ್ತೇವೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರಕರಣ ದಾಖಲಿಸಲು ವಾದಿಯನ್ನು ಕರೆದುಕೊಂಡು ಹೋಗಿದ್ದೆ ಎಂದು ಹೇಳುತ್ತಾರೆ. ಸದರಿ ಪ್ರಕರಣವನ್ನು ದಾಖಲಿಸಲು ವಾದಿಯೇ ಪೋಲಿಸರಿಗೆ ಮಾಹಿತಿ ಹೇಳಿರುತ್ತಾರೆ ನಾನು ಹೇಳಿರುವುದಿಲ್ಲ. ವಾದಿಗೆ ದೂರು ಸಲ್ಲಿಸಲು ಇಚ್ಚೆ ಇರದೆ ಇದ್ದರು ನಾನೇ ಒತ್ತಾಯ ಮಾಡಿ ದೂರನ್ನು ವಾದಿಯ ಕಡೆಯಿಂದ ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ಈ ಪ್ರಕರಣವನ್ನು ಸಹ ವಾದಿಗೆ ಒತ್ತಡವನ್ನು ಹಾಕಿ ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ನಿಡಿ.1 ರ ದಾಖಲೆ ಬರೆದುಕೊಟ್ಟ ನಂತರ ವಾದಿ ದಾವ ಆಸ್ತಿಯ ಸ್ವಾಧೀನತೆ ಹೊಂದಿರಲಿಲ್ಲ, 1 ನೇ ಪ್ರತಿವಾದಿಯಿಂದ ಹಲವಾರು ಸಲ ಹಣ ಪಡೆದಿರುತ್ತಾರೆ ಅಂದರೆ ಸರಿಯಲ್ಲ. ನಿಡಿ.1 ನ್ನು ವಾದಿ ಕಾನೂನುಬದ್ದವಾಗಿ ಬರೆದುಕೊಟ್ಟಿರುತ್ತಾಳೆ, 1 ನೇ ಪ್ರತಿವಾದಿ ಆಗಲಿ ಅಥವಾ ಸಾಕ್ಷಿದಾರರಾಗಲಿ ವಾದಿಯ ಮೇಲೆ ಪ್ರಭಾವಬಿರಿ ಬರೆಸಿಕೊಂಡಿಲ್ಲ ಅಂದರೆ ಸರಿಯಲ್ಲ.

**ಪಿ.ಡಬ್ಲ್ಯೂಃ 02**

ಆ ಬಗ್ಗೆ ಊರಿನ ಮುಖಂಡರ ಸಮಕ್ಷಮ ಪಂಚಾಯತಿ ಆಗಿರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಡಿ.1 ರ ಆಧಾರದ ಮೇಲೆ 1 ನೇ ಪ್ರತಿವಾದಿಗೆ ತನಿಗೆ ನೀಡಿದ ಅಧಿಕಾರವನ್ನು ಚಲಾಯಿಸಿರುತ್ತಾನೆ ವಿನಃ ಯಾವುದೇ ಖೊಟ್ಟಿ ದಾಖಲೆಯನ್ನು ಮಾಡಿಕೊಟ್ಟಿರುವುದಿಲ್ಲ ಅಂದರೆ ಸರಿಯಲ್ಲ. ನಾನು ವಾದಿಯಿಂದ ಒಂದು ಖೊಟ್ಟಿ ಅಧಿಕಾರ ಪತ್ರವನ್ನು ಪಡೆದು ಹಾಜರು ಪಡಿಸಿ ಮುಖ್ಯವಿಚಾರಣೆಯಲ್ಲಿ ಹೇಳಿದಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಟ್ಟು ದಾವ ಆಸ್ತಿಯನ್ನು ಒಡೆದುಕೊಳ್ಳುವ ಉದ್ದೇಶದಿಂದ ಪ್ರಕರಣ ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ನನಗೆ, ದಾವ ಆಸ್ತಿಗೆ ಮತ್ತು ವಾದಿಗೆ ಯಾವುದೇ ರೀತಿಯ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ಮುಖ್ಯವಿಚಾರಣೆಯಲ್ಲಿ ಹೇಳಿದಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ.)**

**ಓ.ಹೇ.ಕೆ.ಸರಿ ಇದೆ**

**ಪ್ರ.ದ.ನ್ಯಾದಂ.ಗಳು, ಮಾನ್ವಿ**